# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :: 1269
2) ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು :: ಶ್ರೀ ಸುನೀಲ್ ವಲ್ಯಾಪುರೆ,
(ವಿಧಾನಸಭೆಯಿಂದ ಚುನಾಯಿತರಾದವರು)
3) ಉತ್ತರಿಸುವ ದಿನಾಂಕ :: 19/12/2024
4) ಉತ್ತರಿಸುವ ಸಚಿವರು :: ಗೃಹ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಗಣ್ಯ ವ್ಯಕ್ತಿಗಳು ಅವರ ಮಕ್ಕಳೂ ಹಾಗೂ ಸೆಲೆಬ್ರಿಟಿಗಳು ಮಾದಕ ದ್ರವ್ಯ ಹಾಗೂ ಅಕ್ರಮ ಗಾಂಜಾ ಸೇವನೆ ಮತ್ತು ಮಾರಾಟ ಪ್ರಕರಣಗಳಲ್ಲಿ ಭಾಗಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಕಳೆದ ಮೂರು ವರ್ಷಗಳಲ್ಲಿ ಅಂತಹ ಎಷ್ಟು ಪ್ರಕರಣಗಳು ವರದಿಯಾಗಿವೆ; ಎಷ್ಟು ಜನರನ್ನು ಬಂಧಿಸಲಾಗಿದೆ; ಹಾಗೂ ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಕೆಯಾದ ಪ್ರಕರಣಗಳ ಸಂಖ್ಯೆ ಎಷ್ಟು; (ಕಳೆದ ಐದು ವರ್ಷಗಳ ಮಾಹಿತಿ ನೀಡುವುದು).</td><td>ರಾಜ್ಯದಲ್ಲಿ ಗಣ್ಯ ವ್ಯಕ್ತಿಗಳು ಅವರ ಮಕ್ಕಳೂ ಹಾಗೂ ಸೆಲೆಬ್ರಿಟಿಗಳು ಮಾದಕ ದ್ರವ್ಯ ಹಾಗೂ ಅಕ್ರಮ ಗಾಂಜಾ ಸೇವನೆ ಮತ್ತು ಮಾರಾಟ ಪ್ರಕರಣಗಳಲ್ಲಿ ಭಾಗಿಯಾಗುತ್ತಿರುವ ಪ್ರಕರಣಗಳು ವರದಿಯಾಗಿದ್ದು, ಈ ಕುರಿತು ಎನ್.ಡಿ.ಪಿ.ಎಸ್. ಕಾಯ್ದೆ ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಿ, ಕಾನೂನು ಕ್ರಮ ಕೈಗೊಳ್ಳಲಾಗುತ್ತಿರುತ್ತದೆ.<br><br>ಕಳೆದ 5 ವರ್ಷಗಳಲ್ಲಿ ಎನ್.ಡಿ.ಪಿ.ಎಸ್. ಕಾಯ್ದೆ ಅಡಿಯಲ್ಲಿ ದಾಖಲಾಗಿರುವ ಪ್ರಕರಣಗಳ ಸಂಖ್ಯೆ ಈ ಕೆಳಕಂಡಂತಿದೆ.<br><br>
<table>
<tr><th>ವರ್ಷ</th><th>ಗಣ್ಯ ವ್ಯಕ್ತಿಗಳು</th><th>ಗಣ್ಯ ವ್ಯಕ್ತಿಗಳ ಮಕ್ಕಳು</th><th>ಸೆಲೆಬ್ರಿಟಿಗಳು</th></tr>
<tr><td>2020</td><td>0</td><td>1</td><td>1<br>(2 ಸೆಲೆಬ್ರಿಟಿಗಳು)</td></tr>
<tr><td>2021</td><td>0</td><td>0</td><td>0</td></tr>
<tr><td>2022</td><td>0</td><td>0</td><td>0</td></tr>
<tr><td>2023</td><td>0</td><td>0</td><td>0</td></tr>
<tr><td>2024<br>(ನವೆಂಬರ್ 30)</td><td>0</td><td>0</td><td>1</td></tr>
</table>
<br>ಬಂಧಿಸಲಾಗಿರುವ ಆರೋಪಿಗಳ ಹಾಗೂ ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಕೆಯಾದ ಪ್ರಕರಣಗಳ ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ.</td></tr>
<tr><td>ಆ)</td><td>ಕಳೆದ ಐದು ವರ್ಷಗಳಲ್ಲಿ ನ್ಯಾಯಾಲಯದಲ್ಲಿ ಸಾಬೀತಾಗಿ ಶಿಕ್ಷೆಯಾಗಿರುವ ಪ್ರಕರಣಗಳು ಎಷ್ಟು; ಈ ಪ್ರಕರಣಗಳಲ್ಲಿ ಭಾಗಿಯಾದ ಎಷ್ಟು ಜನ ಪೊಲೀಸ್ ಅಧಿಕಾರಿಗಳ ಮೇಲೆ ಪ್ರಕರಣ ದಾಖಲಾಗಿವೆ ಅಮಾನತ್ತುಗೊಂಡ ಅಧಿಕಾರಿಗಳು ಎಷ್ಟು? (ಹೆಸರಿನೊಂದಿಗೆ ಪ್ರಕರಣವಾರು ಮಾಹಿತಿ ನೀಡುವುದು)</td><td>ಪೊಲೀಸ್ ಅಧಿಕಾರಿಗಳು ಭಾಗಿಯಾಗಿರುವ ಪ್ರಕರಣದ ಮಾಹಿತಿ ಮತ್ತು ಶಿಕ್ಷೆಯ ವಿವರಗಳನ್ನು ಈ ಕೆಳಕಂಡಂತೆ ಒದಗಿಸಲಾಗಿದೆ.<br><br>ಸದಾಶಿವ ನಗರ ಪೊಲೀಸ್ ಠಾಣೆಯ ಶ್ರೀ. ಎ.ಜಿ. ಪ್ರಭಾಕರ್, ಹೆಚ್.ಸಿ. 9223 ರವರು ಕೆ.ಜಿನಗರ ಪೊಲೀಸ್ ಠಾಣೆ ಮೊ.ಸಂ. 91/2020 ಕಲಂ: 20(ಬಿ) ಎನ್.ಡಿ.ಪಿ.ಎಸ್ ಕಾಯ್ದೆ ಪ್ರಕರಣದ ತನಿಖಾ ಸಂದರ್ಭದಲ್ಲಿ ಆರೋಪಿತರಿಗೆ ಮೊಬೈಲ್ ನಂಬರ್‌ಗಳ ಲೋಕೇಶನರ್ ಹಾಗೂ ಸಿಮ್ ಅಡ್ರಸ್‌ಗಳನ್ನು ವಾಟ್ಸಾಪ್ ಮೂಲಕ ಹಣಕ್ಕಾಗಿ ವಿನಿಮಯ ಮಾಡಿರುವುದು ಕಂಡು ಬಂದಿರುವ ಸಂಬಂಧ ಎ.ಸಿ.ಪಿ. ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳರವರು ವಿಶೇಷ ವರದಿಯನ್ನು ಸಲ್ಲಿಸಿ, ಇದೊಂದು ಗಂಭೀರ ಆರೋಪ ಎಂದು ತಿಳಿಸಿರುತ್ತಾರೆ.<br><br>ಪೊಲೀಸ್ ಇಲಾಖೆಯ ಗೌಪ್ಯತೆಗೆ ಸಂಬಂಧಿಸಿದ ವಿಷಯವನ್ನು ಹಣದ ಆಸೆಗೆ ದುರುಪಯೋಗಪಡಿಸಿಕೊಂಡು, ಪೊಲೀಸ್ ಅಧಿಕಾರಿಯ ಹುದ್ದೆಗೆ ಚ್ಯುತಿ ಬರುವ ರೀತಿಯಲ್ಲಿ ವರ್ತಿಸಿ ಕರ್ತವ್ಯದಲ್ಲಿ ಅತೀವ ದುರ್ನಡತೆಯನ್ನು ಪ್ರದರ್ಶಿಸಿರುವ ಹಿನ್ನಲೆಯಲ್ಲಿ ಅವರನ್ನು ಕರ್ತವ್ಯದಿಂದ ಅಮಾನತ್ತುಗೊಳಿಸಿ, ಇಲಾಖಾ ವಿಚಾರಣಾ ನಂತರ ಅವರಿಗೆ ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗೆ ಧಕ್ಕೆಯಾಗದಂತೆ ಒಂದು ವರ್ಷ ಕಾಲ ಮುಂದೂಡಿದೆ ಹಾಗೂ ಅಮಾನತ್ತಿನಲ್ಲಿ ಕಳೆದ ಅವಧಿಯನ್ನು ಅಮಾನತ್ತು ಎಂದು ಪರಿಗಣಿಸಲಾಗಿರುತ್ತದೆ.</td></tr>
</table>

| | | |
|---|---|---|
| ಇ) | ಮಹಾರಾಷ್ಟ್ರ ಹಾಗೂ ತೆಲಂಗಾಣ ರಾಜ್ಯಗಳ ಗಡಿಗೆ ಹೊಂದಿಕೊಂಡಿರುವ ಕಲ್ಯಾಣ ಕರ್ನಾಟಕ ಜಿಲ್ಲೆಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ದಾಖಲಾದ ಅಕ್ರಮ ಗಾಂಜಾ ಸೇವನೆ ಮತ್ತು ಮಾರಾಟ ಪ್ರಕರಣಗಳ ಸಂಖ್ಯೆ ಎಷ್ಟು ಈ ಸಂಬಂಧ ಎಷ್ಟು ಜನರನ್ನು ಬಂಧಿಸಲಾಗಿದೆ; ಹಾಗೂ ಅವರಿಂದ ವಶಪಡಿಕೊಂಡ ಗಾಂಜಾ ಪ್ರಮಾಣ ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು) | ಮಹಾರಾಷ್ಟ್ರ ಹಾಗೂ ತೆಲಂಗಾಣ ರಾಜ್ಯಗಳ ಗಡಿಗೆ ಹೊಂದಿಕೊಂಡಿರುವ ಕಲ್ಯಾಣ ಕರ್ನಾಟಕ ಜಿಲ್ಲೆಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ದಾಖಲಾದ ಅಕ್ರಮ ಗಾಂಜಾ ಸೇವನೆ ಮತ್ತು ಮಾರಾಟ ಪ್ರಕರಣಗಳ ಸಂಖ್ಯೆ, ಬಂಧಿಸಲಾದ ಒಟ್ಟು ಎಷ್ಟು ವಶಪಡಿಕೊಂಡ ಗಾಂಜಾ ಪ್ರಮಾಣ ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ. |
| ಈ) | ಈ ಜಿಲ್ಲೆಗಳಲ್ಲಿ ಅಕ್ರಮ ಗಾಂಜಾ ಹಾಗೂ ಮಟ್ಕಾ ಹಾವಳಿ ವಿಪರೀತವಾಗಿದ್ದು, ಇದು ಬಡ ಹಾಗೂ ಮಧ್ಯಮ ವರ್ಗದ ಜನರ ಮೇಲೆ ದುಷ್ಪರಿಣಾಮ ಬೀರುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಅಕ್ರಮವಾಗಿ ಬೆಳೆಯಲಾದ ಗಾಂಜಾ ಬೆಳೆದ ಜಮೀನಿಗೆ ದಾಳಿ ಮಾಡಿದ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳ ಮೇಲೆ ಮಾರಣಾಂತಿಕ ಹಲ್ಲೆ ಮಾಡಿದ್ದು, ಈ ಪ್ರಕರಣದಲ್ಲಿ ಆರೋಪಿಗಳಿಗೆ ಶಿಕ್ಷೆಯಾಗಿದೆಯೇ; ಈ ಪ್ರಕರಣ ಪ್ರಸ್ತುತ ಯಾವ ಹಂತದಲ್ಲಿದೆ: (ಮಾಹಿತಿ ನೀಡುವುದು) | ಮಹಾರಾಷ್ಟ್ರ ಹಾಗೂ ತೆಲಂಗಾಣ ರಾಜ್ಯಗಳ ಗಡಿಗೆ ಹೊಂದಿಕೊಂಡಿರುವ ಕಲ್ಯಾಣ ಕರ್ನಾಟಕ ಜಿಲ್ಲೆಗಳ ಪೈಕಿ ಬೀದರ್ ಜಿಲ್ಲೆಯಲ್ಲಿ ಅಕ್ರಮವಾಗಿ ಗಾಂಜಾ ಬೆಳೆಯಲಾದ ಜಮೀನಿಗೆ ದಾಳಿ ಮಾಡಿದ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳ ಮೇಲೆ ಮಾರಣಾಂತಿಕ ಹಲ್ಲೆ ಮಾಡಿರುವ ಸಂಬಂಧ ಬೀದರ್ ಜಿಲ್ಲೆಯ ಮಂಠಾಳ ಠಾಣೆಯಲ್ಲಿ ಅಪರಾಧ ಸಂಖ್ಯೆ: 84/2022 ಕಲಂ 143, 147, 148, 307, 333, 353, 354, 395, 504, 506, 120 (ಬಿ), 121, 397, 149 ಐಪಿಸಿ & 25 1ಎಬಿ ಆರ್ಮ್ಸ್ ಆಕ್ಟ್ ಅಡಿಯಲ್ಲಿ ಪ್ರಕರಣ ದಾಖಲಾಗಿರುತ್ತದೆ.<br><br>ಈ ಪ್ರಕರಣದಲ್ಲಿ 33 ಆರೋಪಿತರನ್ನು ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಪ್ರಸ್ತುತ ಪ್ರಕರಣವು ನ್ಯಾಯಾಲಯದ ವಿಚಾರಣೆಯಲ್ಲಿರುತ್ತದೆ. |
| ಉ) | ಕಲಬುರಗಿ ವಿಜಯಪುರ ಮತ್ತು ಬೀದರ್ ಜಿಲ್ಲೆಗಳಲ್ಲಿ ನಕಲಿ ಗುಟ್ಕಾ ತಯಾರಿಸುವ ಕಂಪನಿಗಳು ಸಕ್ರಿಯವಾಗಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ: ಇದು ಜನರ ಆರೋಗ್ಯದ ಮೇಲೆ ತೀವ್ರವಾದ ದುಷ್ಪರಿಣಾಮ ಬೀರುತ್ತಿದ್ದು, ಇದರ ನಿಗ್ರಹಕ್ಕೆ ಸರ್ಕಾರ ಮುಂದಾಗುವುದೇ: | ಕಲಬುರಗಿ ವಿಜಯಪುರ ಮತ್ತು ಬೀದರ್ ಜಿಲ್ಲೆಗಳಲ್ಲಿ ನಕಲಿ ಗುಟ್ಕಾ ತಯಾರಿಸುವ ಕಂಪನಿಗಳು ಇರುವುದಿಲ್ಲ. |
| ಊ) | ಕಲಬುರಗಿ ಜಿಲ್ಲೆ ಹಾಗೂ ಸುತ್ತಮುತ್ತ ಕೊಲೆ ಸುಲಿಗೆ, ಅತ್ಯಾಚಾರ, ಗಾಂಜಾ, ಗುಟ್ಕಾ, ಬೆಟ್ಟಿಂಗ್ ಪ್ರಶ್ನೆ ಪತ್ರಿಕೆ ಲೀಕ್ ಸೇರಿದಂತೆ ಹಲವಾರು ಸಮಾಜ ಬಾಹಿರ ಚಟುವಟಿಕೆಗಳು ವರದಿಯಾಗುತ್ತಿದ್ದು, ಇಂತಹ ಸಮಾಜ ದ್ರೋಹಿ ಕೃತ್ಯಗಳಲ್ಲಿ ತೊಡಗಿಸಿಕೊಂಡವರಿಗೆ ಕಾನೂನಿನ ಭಯ ಇಲ್ಲದಂತಾಗಿರುವುದು ಇವುಗಳ ನಿಗ್ರಹಕ್ಕೆ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು? (ಮಾಹಿತಿ ನೀಡುವುದು) | ಕಲಬುರಗಿ ಜಿಲ್ಲೆ ಹಾಗೂ ಸುತ್ತಮುತ್ತ ಕೊಲೆ, ಸುಲಿಗೆ, ಅತ್ಯಾಚಾರ, ಗಾಂಜಾ, ಗುಟ್ಕಾ, ಬೆಟ್ಟಿಂಗ್, ಪ್ರಶ್ನೆ ಪತ್ರಿಕೆ ಲೀಕ್ ಸೇರಿದಂತೆ ಹಲವಾರು ಸಮಾಜ ಬಾಹಿರ ಚಟುವಟಿಕೆಗಳ ಸಂಬಂಧ ದಾಖಲಾಗಿರುವ ಪ್ರಕರಣಗಳ ವಿವರವನ್ನು ಅನುಬಂಧ-3ರಲ್ಲಿ ನೀಡಲಾಗಿದೆ.<br><br>ಇಂತಹ ಅಪರಾಧ ಪ್ರಕರಣಗಳನ್ನು ನಿಯಂತ್ರಿಸಲು ಕೈಗೊಂಡ ಕ್ರಮಗಳು ಈ ಕೆಳಕಂಡಂತಿದೆ.<br>➢ ಇಂತಹ ಘಟನೆಗಳು ಜರುಗಿದಾಗ ತಕ್ಷಣ ಪ್ರಕರಣಗಳನ್ನು ದಾಖಲಿಸಿಕೊಂಡು ಪ್ರಕರಣದಲ್ಲಿ ಆರೋಪಿತರನ್ನು ಪತ್ತೆ ಮಾಡಿ, ದಸ್ತಗಿರಿ ಮಾಡಿ ಸೂಕ್ತ ತನಿಖೆ ಕೈಕೊಂಡು ಆರೋಪಿತರ ವಿರುದ್ಧ ದೋಷಾರೋಪಣಾ ಪತ್ರವನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿ ಆರೋಪಿತರಿಗೆ ಶಿಕ್ಷೆಯಾಗುವ ನಿಟ್ಟಿನಲ್ಲಿ ಕ್ರಮ ಕೈಕೊಳ್ಳಲಾಗುತ್ತಿದೆ.<br>➢ ಇಂತಹ ಪ್ರಕರಣಗಳಲ್ಲಿ ಭಾಗಿಯಾದ ಆರೋಪಿತರ ವಿರುದ್ಧ ಗಡಿಪಾರು ಮತ್ತು ಗುಂಡಾಕಾಯ್ದೆ ಅಡಿಯಲ್ಲಿ ಕ್ರಮ ಕೈಕೊಳ್ಳಲಾಗುತ್ತಿದೆ.<br>➢ ಇಂತಹ ಪ್ರಕರಣಗಳಲ್ಲಿ ಭಾಗಿಯಾದ ರೌಡಿಗಳ ವಿರುದ್ಧ ಮುಂಜಾಗೃತ ಕ್ರಮ ಕೈಗೊಂಡು ಬಾಂಡ್ ಓವರ್ ಮಾಡಿಸಲಾಗುತ್ತಿದೆ. ಬಾಂಡ್ ಓವರ್ ಉಲ್ಲಂಘನೆ ಮಾಡಿದವರ ವಿರುದ್ಧ ಬಾಂಡ್ ಫಾರ್ ಫ್ಯೂಚರ್ ಕ್ರಮ ಕೈಕೊಳ್ಳಲಾಗುತ್ತಿದೆ. |

| | | |
|---|---|---|
| | | ➢ ಇಂತಹ ಪ್ರಕರಣಗಳನ್ನು ತಡೆಗಟ್ಟಲು ಶಾಲಾ ಕಾಲೇಜು, ಬಸ್ ನಿಲ್ದಾಣ, ರೈಲ್ವೆ ಸ್ಟೇಷನ್ ಹಾಗೂ ಜನನಿಬಿಡ ಪ್ರದೇಶಗಳಲ್ಲಿ ಸಿಬ್ಬಂದಿಯವರಿಗೆ ಕರ್ತವ್ಯಕ್ಕೆ ನೇಮಿಸಲಾಗುತ್ತಿದೆ ಹಾಗೂ ಪ್ರಮುಖ ಜನನಿಬೀಡ ಸ್ಥಳಗಳಲ್ಲಿ ಸಿ.ಸಿ. ಕ್ಯಾಮೆರಾಗಳನ್ನು ಅಳವಡಿಸಿದ್ದು ಪರಿಶೀಲಿಸಿ ಕ್ರಮ ಕೈಕೊಳ್ಳಲಾಗುತ್ತಿದೆ.<br>➢ ಬೀಟ್ ವ್ಯವಸ್ಥೆಯನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದು, ಬೀಟ್ ಸಿಬ್ಬಂದಿಯವರು ಪರಿಣಾಮಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಅಪರಾಧ ಪ್ರಕರಣಗಳು ನಡೆಯದಂತೆ ಮುನ್ನೆಚ್ಚರಿಕೆ ಕ್ರಮ ವಹಿಸಲಾಗುತ್ತಿದೆ.<br>➢ ರಾತ್ರಿ ಮತ್ತು ಹಗಲು ಗಸ್ತು ಹಾಗೂ ಗ್ರಾಮ ಗಸ್ತುಗಳ ಮುಖಾಂತರ ಮಾಹಿತಿ ಸಂಗ್ರಹಿಸಿ ಇಂತಹ ಪ್ರಕರಣಗಳು ಜರುಗದಂತೆ ಮುಂಜಾಗ್ರತ ಕ್ರಮ ಕೈಕೊಳ್ಳಲಾಗುತ್ತಿದೆ.<br>➢ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳನ್ನು ತಡೆಗಟ್ಟುವ ಕುರಿತು ಜಿಲ್ಲೆಯ ಪ್ರತಿ ಠಾಣೆಗಳಲ್ಲಿ ಮಹಿಳಾ ಹೆಲ್ಪ್ ಡೆಸ್ಕ್ ಕಾರ್ಯನಿರ್ವಹಿಸುತ್ತಿದ್ದು, ಮಹಿಳೆಯರ ಕುಂದು ಕೊರತೆಗಳನ್ನು ಆಲಿಸಿ ಕ್ರಮ ಕೈಕೊಳ್ಳಲಾಗುತ್ತಿದೆ.<br>➢ ಸಾರ್ವಜನಿಕರಿಗೆ ಯಾವುದೇ ಕಾನೂನಿನ ಸಮಸ್ಯೆಗಳು ಎದುರಾದಲ್ಲಿ ಕೂಡಲೇ ತುರ್ತು ಸಹಾಯವಾಣಿ-112ಗೆ, ಇಲ್ಲವೇ ಪೊಲೀಸ್ ಠಾಣೆಯ ದೂರವಾಣಿ ಸಂಖ್ಯೆಗಳಿಗೆ ಕರೆ ಮಾಡಲು ಸೂಚಿಸಲಾಗಿರುತ್ತದೆ.<br>➢ ಕಲಬುರಗಿ ಜಿಲ್ಲೆಯಲ್ಲಿ ಹೊರ ಜಿಲ್ಲೆಗಳಿಂದ ಹಾಗೂ ಹೊರ ರಾಜ್ಯಗಳಿಂದ ಮಾದಕ ವಸ್ತುಗಳ ನಿರ್ಬಂಧಕ್ಕಾಗಿ ಹಾಗೂ ಅಕ್ರಮ ವ್ಯವಹಾರಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಜಿಲ್ಲೆಯಲ್ಲಿ ಚೆಕ್ ಪೋಸ್ಟ್‌ಗಳನ್ನು ತೆರೆಯಲಾಗಿದೆ.<br>➢ ಜಿಲ್ಲೆ ಮತ್ತು ರಾಜ್ಯದ ಗಡಿಭಾಗದಲ್ಲಿರುವ ಚೆಕ್ ಪೋಸ್ಟ್‌ಗಳಲ್ಲಿ ಸಿಬ್ಬಂದಿಗಳಿಂದ ವಾಹನ ತಪಾಸಣೆ ನಡೆಸಲಾಗುತ್ತಿದೆ. ಅಕ್ರಮ ಸಾಗಾಟ ಪತ್ತೆಯಾದಲ್ಲಿ ಸೂಕ್ತ ಕಾನೂನು ಕ್ರಮ ಜರುಗಿಸಲಾಗುತ್ತಿದೆ. |

ಒಇ 54 ಪಿಎನ್‌ಡಿ 2024

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು

ಅನುಬಂಧ-1

## ಪ್ರಕರಣಗಳ ವಿವರಗಳು

| ಕ್ರ. ಸಂ. | ಪೊ.ಠಾ ಹೆಸರು, ಮೊ.ಸಂ. ಕಲಂ | ಎಫ್ .ಐ.ಆರ್ ದಿನಾಂಕ | ಕೃತ್ಯ ನಡೆದ ಸ್ಥಳ | ಭಾಗಿಯಾದ ಆರೋಪಿಗಳ ಸಂಖ್ಯೆ | ಬಂದಿತರ ವಿವರಗಳು | ಪ್ರಕರಣದಲ್ಲಿ ವಶಪಡಿಸಿಕೊಂಡ ಮಾದಕ ದ್ರವ್ಯಗಳ ವಿವರಗಳು | ಶಿಕ್ಷೆಯಾದಲ್ಲಿ ಶಿಕ್ಷೆಯಾದ ವಿವರಗಳು | ಪ್ರಕರಣದ ಪ್ರಸ್ತುತ ಹಂತ |
|---|---|---|---|---|---|---|---|---|
| 1 | ಕಾಟನ್‌ಪೇಟೆ ಪೊಲೀಸ್ ಠಾಣೆ ಮೊಸಂ.109/2020 ಎನ್.ಡಿ.ಪಿ.ಎಸ್ ಆಕ್ಟ್ | 04-09-2020 | ಬೆಂಗಳೂರಿನ ವಿವಿಧ ಪಬ್ ಗಳಲ್ಲಿ | 25 | 1)ರಾಗಿಣಿ ದ್ವಿವೇದಿ<br>2)ಸಂಜನಾ ಗಲ್ರಾನಿ (ಚಿತ್ರನಟಿಯರು) | ಗಾಂಜಾ, ಎಂ.ಡಿ.ಎಂ.ಎ ಕ್ರಿಸ್ಟಲ್ ಮತ್ತು ಎಕ್ಸ್‌ಟೆಸಿ ಪಿಲ್ಸ್, ಎಲ್.ಎಸ್.ಡಿ | ಪಿ.ಟಿ | ಸಿಸಿಹೆಚ್-33 ಸ್ಪೆಷಲ್ ಸಿಸಿ ನಂ: 212/21 |
| 2 | ಹೆಬ್ಬಗೋಡಿ ಪೊಲೀಸ್ ಠಾಣಾ ಮೊ.ಸಂ.329/2024 | 21-05-2024 | ಜಿ.ಆರ್ ಫಾರ್ಮ್ಸ್, ಹೆಬ್ಬುಗೋಡಿ, ಬೆಂಗಳೂರು | 88 | ಎ-12 ಶ್ರೀಮತಿ ಹೇಮಾ ಕೊಲ್ಲಾ (ತೆಲಗು ಚಿತ್ರ ನಟಿ) | ಹೈಡ್ರೋ ಗಾಂಜಾ, ಎಂ.ಡಿ.ಎಂ.ಎ ಕ್ರಿಸ್ಟಲ್ ಮತ್ತು ಎಕ್ಸ್‌ಟಸಿ ಪಿಲ್ಸ್. | ಪಿ.ಟಿ | 8ನೇ ಎಡಿಜೆ ಬೆಂಗಳೂರು ಗ್ರಾಮಾಂತ ಸ್ಪೆಷಲ್ ಸಿಸಿ ನಂ: 741/24 |
| 3 | ಕೆಂಪೇಗೌಡ ನಗರ ಪೊಲೀಸ್ ಠಾಣಾ ಮೊ.ಸಂ. 91/2020 ಎನ್.ಡಿ.ಪಿ.ಎಸ್ ಆಕ್ಟ್ | 04-11-2024 | ಚಾಮರಾಜಪೇಟೆ ಪಾರೇಸ್ ಫೋರ್ಸ್ ಆಫೀಸ್ | 13 | ದರ್ಶನ್ ಲಮಾಣಿ ತಂದೆ ರುದ್ರಪ್ಪ ಲಮಾಣಿ. | ಹೈಡ್ರೋಗಾಂಜಾ | ಮೇಲಾಧಿಕಾರಿಗಳ ಆದೇಶದಂತೆ ಸಿ.ಐ.ಡಿ ಗೆ ವರ್ಗಾವಣೆಯಾಗಿರುತ್ತದೆ. ಸ್ಪೆಷಲ್ ಸಿಸಿ ನಂ.187/2022 ಸಿಸಿಹೆಚ್-35 | |

ಅನುಬಂಧ-2

ಕಲ್ಯಾಣ ಕರ್ನಾಟಕ ಜಿಲ್ಲೆಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ದಾಖಲಾದ ಅಕ್ರಮ ಗಾಂಜಾ ಸೇವನೆ ಮತ್ತು ಮಾರಾಟ ಪ್ರಕರಣಗಳ ಒಟ್ಟು ಸಂಖ್ಯೆ ಬಂಧಿಸಲಾದ ಒಟ್ಟು ಎಷ್ಟು ವಶಪಡಿಕೊಂಡ ಗಾಂಜಾ ಪ್ರಮಾಣ ವಿವರಗಳು ಈ ಕೆಳಕಂಡತಿದೆ.

**ಬೀದರ್ ಜಿಲ್ಲೆ**

| ವರ್ಷ | ಅಕ್ರಮ ಗಾಂಜಾ ಸೇವನೆ ಪ್ರಕಣಗಳ ಸಂಖ್ಯೆ | ಅಕ್ರಮ ಗಾಂಜಾ ಸೇವನೆಯಿಂದ ಬಂಧಿಸಿದವರ ಸಂಖ್ಯೆ | ಅಕ್ರಮ ಗಾಂಜಾ ಮಾರಾಟ ಪ್ರಕರಣಗಳ ಸಂಖ್ಯೆ | ಅಕ್ರಮ ಗಾಂಜಾ ಮಾರಾಟದಿಂದ ಬಂಧಿಸಿದವರ ಸಂಖ್ಯೆ. | ವಶಪಡಿಸಿಕೊಂಡ ಗಾಂಜಾ ಪ್ರಮಾಣ |
|---|---|---|---|---|---|
| 2021 | -- | -- | 12 | 37 | 1512.55 ಕೆಜಿ. |
| 2022 | -- | -- | 12 | 25 | 1065.320 ಕಜಿ. |
| 2023 | -- | -- | 32 | 66 | 1405.296 ಕೆಜಿ. |
| 2024 | -- | -- | 8 | 21 | 734.137 ಕೆಜಿ. |

**ಬಳ್ಳಾರಿ ಜಿಲ್ಲೆ**

| ವರ್ಷ | ಅಕ್ರಮ ಗಾಂಜಾ ಸೇವನೆ ಪ್ರಕಣಗಳ ಸಂಖ್ಯೆ | ಅಕ್ರಮ ಗಾಂಜಾ ಸೇವನೆಯಿಂದ ಬಂಧಿಸಿದವರ ಸಂಖ್ಯೆ. | ಅಕ್ರಮ ಗಾಂಜಾ ಮಾರಾಟ ಪ್ರಕರಣಗಳ ಸಂಖ್ಯೆ. | ಅಕ್ರಮ ಗಾಂಜಾ ಮಾರಾಟದಿಂದ ಬಂಧಿಸಿದವರ ಸಂಖ್ಯೆ. | ವಶಪಡಿಸಿಕೊಂಡ ಗಾಂಜಾ ಪ್ರಮಾಣ |
|---|---|---|---|---|---|
| 2021 | -- | -- | 12 | 16 | 227 ಕೆ.ಕಿ 529 ಗ್ರಾಂ |
| 2022 | -- | -- | 24 | 52 | 65 ಕೆ.ಜಿ. 461 ಗ್ರಾಂ |
| 2023 | 25 | 35 | 29 | 63 | 56 ಕೆ.ಜಿ. 02 ಗ್ರಾಂ |
| 2024 | 12 | 15 | 17 | 29 | 110 ಕೆ.ಜಿ. 101 ಗ್ರಾಂ |

**ಕಲಬುರಗಿ ಜಿಲ್ಲೆ**

| ವರ್ಷ | ಅಕ್ರಮಗಾಂಜಾ ಸೇವನೆ ಪ್ರಕರಣ ಸಂಖ್ಯೆ | ಅಕ್ರಮಗಾಂಜಾ ಸೇವನೆಯಿಂದ ಬಂಧಿಸಿದವರ ಒಟ್ಟು ಸಂಖ್ಯೆ | ಅಕ್ರಮಗಾಂಜಾ ಮಾರಾಟ ಪ್ರಕರಣಗಳ ಸಂಖ್ಯೆ | ಅಕ್ರಮಗಾಂಜಾ ಮಾರಾಟದಿಂದ ಬಂಧಿಸಿದವರ ಸಂಖ್ಯೆ | ವಶಪಡಿಸಿಕೊಂಡ ಗಾಂಜಾ ಪ್ರಮಾಣ |
|---|---|---|---|---|---|
| 2021 | 14 | 15 | 15 | 22 | 483.580ಕೆ.ಜಿ. |
| 2022 | 23 | 25 | 30 | 62 | 178.732ಕೆ.ಜಿ. |
| 2023 | 41 | 15 | 15 | 47 | 277.87ಕೆ.ಜಿ. |
| 2024 | 04 | 04 | 10 | 10 | 13.456ಕೆ.ಜಿ. |

ರಾಯಚೂರು ಜಿಲ್ಲೆ

| ವರ್ಷ | ಅಕ್ರಮ ಗಾಂಜಾ ಸೇವನೆ ಪ್ರಕರಣಗಳ ಸಂಖ್ಯೆ | ಅಕ್ರಮ ಗಾಂಜಾ ಸೇವನೆಯಿಂದ ಬಂಧಿಸಿದವರ ಸಂಖ್ಯೆ | ಅಕ್ರಮ ಗಾಂಜಾ ಮಾರಾಟ ಪ್ರಕರಣಗಳ ಸಂಖ್ಯೆ | ಅಕ್ರಮ ಗಾಂಜಾ ಮಾರಾಟದಿಂದ ಬಂಧಿಸಿದವರ ಸಂಖ್ಯೆ | ವಶಪಡಿಸಿಕೊಂಡ ಗಾಂಜಾ ಪ್ರಮಾಣ |
|---|---|---|---|---|---|
| 2021 | – | – | 3 | 5 | 11.61 |
| 2022 | – | – | 9 | 21 | 7.83 |
| 2023 | – | – | 12 | 20 | 23.554 |
| 2024 | 6 | 8 | 5 | 10 | 2.123 |

**ಯಾದಗಿರಿ ಜಿಲ್ಲೆ**

| ವರ್ಷ | ಅಕ್ರಮ ಗಾಂಜಾ ಸೇವನೆ ಪ್ರಕರಣ ಸಂಖ್ಯೆ | ಅಕ್ರಮ ಗಾಂಜಾ ಸೇವನೆಯಿಂದ ಬಂಧಿಸಿದವರ ಒಟ್ಟು ಸಂಖ್ಯೆ | ಅಕ್ರಮ ಗಾಂಜಾ ಮಾರಾಟ ಪ್ರಕರಣಗಳ ಸಂಖ್ಯೆ | ಅಕ್ರಮ ಗಾಂಜಾ ಮಾರಾಟದಿಂದ ಬಂಧಿಸಿದವರ ಒಟ್ಟು ಸಂಖ್ಯೆ | ವಶಪಡಿಸಿಕೊಂಡ ಗಾಂಜಾ ಪ್ರಮಾಣ |
|---|---|---|---|---|---|
| 2021 | – | – | – | – | – |
| 2022 | – | – | 02 | 04 | 123.238 Kg |
| 2023 | – | – | 08 | 08 | 39.941 Kg |
| 2024 | – | – | 04 | 07 | 7.067 Kg |

**ಕೊಪ್ಪಳ ಜಿಲ್ಲೆ**

| ವರ್ಷ | ಅಕ್ರಮ ಗಾಂಜಾ ಸೇವನೆ ಪ್ರಕರಣ ಸಂಖ್ಯೆ | ಅಕ್ರಮ ಗಾಂಜಾ ಸೇವನೆಯಿಂದ ಬಂಧಿಸಿದವರ ಒಟ್ಟು ಸಂಖ್ಯೆ | ಅಕ್ರಮ ಗಾಂಜಾ ಮಾರಾಟ ಪ್ರಕರಣಗಳ ಸಂಖ್ಯೆ | ಅಕ್ರಮ ಗಾಂಜಾ ಮಾರಾಟದಿಂದ ಬಂಧಿಸಿದವರ ಒಟ್ಟು ಸಂಖ್ಯೆ | ವಶಪಡಿಸಿಕೊಂಡ ಗಾಂಜಾ ಪ್ರಮಾಣ |
|---|---|---|---|---|---|
| 2021 | – | – | – | – | – |
| 2022 | – | – | – | – | - |
| 2023 | – | – | – | – | – |
| 2024 | – | – | – | – | – |

## ವಿಜಯನಗರ ಜಿಲ್ಲೆ

| ವರ್ಷ | ಅಕ್ರಮ ಗಾಂಜಾ ಸೇವನೆ ಪ್ರಕರಣ ಸಂಖ್ಯೆ | ಅಕ್ರಮ ಗಾಂಜಾ ಸೇವನೆಯಿಂದ ಬಂದಿಸಿದವರ ಒಟ್ಟು ಸಂಖ್ಯೆ | ಅಕ್ರಮ ಗಾಂಜಾ ಮಾರಾಟ ಪ್ರಕರಣಗಳ ಸಂಖ್ಯೆ | ಅಕ್ರಮ ಗಾಂಜಾ ಮಾರಾಟ ದಿಂದ ಬಂಧಿಸಿದವರ ಒಟ್ಟು ಸಂಖ್ಯೆ | ವಶಪಡಿಸಿಕೊಂಡ ಗಾಂಜಾ ಪ್ರಮಾಣ |
|---|---|---|---|---|---|
| 2021 | 0 | 0 | 12 | 21 | 41.604 KG |
| 2022 | 0 | 0 | 4 | 10 | 5.95 KG |
| 2023 | 0 | 0 | 27 | 56 | 24.287 KG |
| 2024 | 27 | 29 | 29 | 48 | 20.881 KG |

## ಸಿಓಪಿ, ಕಲಬುರಗಿ ನಗರ

| ವರ್ಷ | ಅಕ್ರಮ ಗಾಂಜಾ ಸೇವನೆ ಪ್ರಕರಣ ಸಂಖ್ಯೆ | ಅಕ್ರಮ ಗಾಂಜಾ ಸೇವನೆಯಿಂದ ಬಂದಿಸಿದವರ ಒಟ್ಟು ಸಂಖ್ಯೆ | ಅಕ್ರಮ ಗಾಂಜಾ ಮಾರಾಟ ಪ್ರಕರಣಗಳ ಸಂಖ್ಯೆ | ಅಕ್ರಮ ಗಾಂಜಾ ಮಾರಾಟ ದಿಂದ ಬಂಧಿಸಿದವರ ಒಟ್ಟು ಸಂಖ್ಯೆ | ವಶಪಡಿಸಿಕೊಂಡ ಗಾಂಜಾ ಪ್ರಮಾಣ |
|---|---|---|---|---|---|
| 2021 | 01 | 02 | 11 | 27 | 673 ಕೆ.ಜಿ 958 ಗ್ರಾಂ |
| 2022 | 29 | 38 | 18 | 33 | 46 ಕೆ.ಜಿ 461 ಗ್ರಾಂ |
| 2023 | 25 | 36 | 26 | 43 | 22 ಕೆ.ಜಿ 565 ಗ್ರಾಂ |
| 2024 | 17 | 23 | 19 | 31 | 13 ಕೆ.ಜಿ 017 ಗ್ರಾಂ |

# ಅನುಬಂಧ-3

| ಕ್ರಸಂ | ಘಟಕ | ವರ್ಷ | ಕೊಲೆ | ಸುಲಿಗೆ | ಅತ್ಯಾಚಾರ | ಗಾಂಜಾ | ಗುಟ್ಕಾ | ಬೆಟ್ಟಿಂಗ್ | ಪ್ರಶ್ನೆ ಪತ್ರಿಕೆ ಲೀಕ್ | ಒಟ್ಟು |
|---|---|---|---|---|---|---|---|---|---|---|
| 1 | ಕಲಬುರಗಿ ನಗರ | 2022 | 26 | 26 | 21 | 47 | 0 | 4 | 6 | 130 |
| 2 | | 2023 | 29 | 59 | 31 | 50 | 0 | 5 | 1 | 175 |
| 3 | | 2024 | 28 | 32 | 25 | 40 | 0 | 1 | 0 | 126 |
| | | | | | | | | | | |
| 1 | ಕಲಬುರಗಿ ಜಿಲ್ಲೆ | 2022 | 56 | 09 | 13 | 53 | 0 | 0 | 0 | 131 |
| 2 | | 2023 | 55 | 9 | 10 | 56 | 0 | 0 | 0 | 130 |
| 3 | | 2024 | 30 | 16 | 16 | 14 | 0 | 2 | 1 | 79 |